# ಝೂಮ್ ಕ್ಲಾಸ್‌ನಲ್ಲಿ ಮಕ್ಕಳೇ ಟೀಚರ್



■ ಸ್ವಯಂಪ್ರಭಾ

**ದಿನದಿಂದ ದಿನಕ್ಕೆ ಬದಲಾಗುತ್ತಿರುವ ಸಮಾಜವನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕೆಂದರೆ, ಮಕ್ಕಳೆದುರು ಶಿಷ್ಯರಾಗಲೇಬೇಕು.**

ಲಾಕ್ ಡೌನ್ ಎಷ್ಟೊಂದು ಜನರ ಬಣ್ಣ ಬಯಲು ಮಾಡಿದೆ ಅಂತೀರಿ; ಲಾಕ್‌ಡೌನ್‌ನ ಸಂದರ್ಭದಲ್ಲಿ ಎಷ್ಟೊಂದು ಜನರ ತಲೆಗೂದಲು ಮತ್ತು ಗಡ್ಡದ ಬಣ್ಣ ಬಯಲಾದ ಹಾಗೆ, ಈ ಅಪ್ಪ ಅಮ್ಮ ನಿಜವಾಗಿಯೂ ಎಷ್ಟು ಬುದ್ಧಿವಂತರು ಅನ್ನೋದು ಮಕ್ಕಳಿಗೆ ಗೊತ್ತಾಗಿಬಿಟ್ಟಿದೆ. ಅದನ್ನು ಕಲಿ, ಇದನ್ನು ಕಲಿ ಎಂದು ಒತ್ತಾಯಿಸುವ ಅಮ್ಮನಿಗೆ ಝೂಮ್ ಮೀಟಿಂಗ್‌ಗೆ ಲಾಗಿನ್ ಆಗುವುದು ಹೇಗೆಂದೇ ಗೊತ್ತಿಲ್ಲ. ಹಾಗೆಂದು ಮಕ್ಕಳು ಝೂಮ್ ಮೀಟಿಂಗ್‌ನಲ್ಲಿ ಪಳಗಿದ್ದಾರೆ ಎಂದರ್ಥವಲ್ಲ. ಆದರೆ ಮೊಬೈಲ್ ಅಥವಾ ಲ್ಯಾಪ್‌ಟಾಪ್‌ನಲ್ಲಿ ಕಾಣುವ ಸೂಚನೆಗಳನ್ನು ಪಾಲಿಸುತ್ತ, ಲಾಗಿನ್ ಆಗುವುದಕ್ಕೆ ಉದ್ಯೋಗಸ್ಥ ಅಪ್ಪಅಮ್ಮ ಪೇಚಾಡುತ್ತಾರಲ್ಲ, ಆ ಮಟ್ಟಿಗೆ ಮಕ್ಕಳು ಒದ್ದಾಡುವುದಿಲ್ಲ. ತಂತ್ರಜ್ಞಾನಕ್ಕೆ ಬೇಗ ಒಗ್ಗಿಕೊಳ್ಳುವ ಎಳೆಯರು, ಅಪ್ಪಅಮ್ಮ ಕಲಿಯುವ ವೇಗ ನೋಡಿ ನಕ್ಕಿರಲಿಕ್ಕೂ ಸಾಕು. ಹಾಗಾಗಿ, ಎಷ್ಟೋ ಮನೆಗಳಲ್ಲಿ ಲಾಕ್‌ಡೌನ್ ಸಂದರ್ಭದಲ್ಲಿ ಮಕ್ಕಳೇ ಶಿಕ್ಷಕರಾಗಿದ್ದರು.

ಹೆಚ್ಚಿನ ಕಚೇರಿಗಳಲ್ಲಿ ಪ್ರಸ್ತುತ ಉನ್ನತ ಹುದ್ದೆಯಲ್ಲಿ ಇರುವವರು ಎಂದರೆ, ಸುಮಾರು 80ರ ದಶಕದಲ್ಲಿ ಹುಟ್ಟಿದವರು. ಆ ತಲೆಮಾರಿನವರು ಡಿಜಿಟಲ್ ತಂತ್ರಜ್ಞಾನ ವಿಕಾಸಕ್ಕೆ ಪೂರ್ವ ಕಾಲದಲ್ಲೇ ಶಿಕ್ಷಣ ಪಡೆದವರು. ಆದ್ದರಿಂದ ಡಿಜಿಟಲ್ ಯುಗದಲ್ಲಿ ವೇಗವಾದ ಹೆಜ್ಜೆ ಹಾಕುವುದು ಹೆಚ್ಚಿನವರಿಗೆ ಕಷ್ಟ. ಮೊನ್ನೆ ಪ್ರಸಿದ್ಧ ಕಂಪನಿಯ ಟೀವಿ ವಿತರಕರ ಟೀಮ್ ಲೀಡರ್ ಸತ್ಯನಾರಾಯಣ್ ಎನ್ನುವವರು ತಮ್ಮ ಬಾಸ್ ಎದುರು ಮುಜುಗರಕ್ಕೀಡಾಬೇಕಾಯಿತು. ಝೂಮ್‌ನಲ್ಲಿ ತರಬೇತುದಾರರ ಮೀಟಿಂಗ್ ನಡೆಯುತ್ತಿತ್ತು. ಸತ್ಯನಾರಾಯಣ್ ಲ್ಯಾಪ್‌ಟಾಪ್‌ಗೆ ಮುಖವಿಟ್ಟು ಕುಳಿತಿದ್ದರು. ವಲಯ ವ್ಯಾಪ್ತಿಯ ಮೀಟಿಂಗ್ ಆದ್ದರಿಂದ ವರದಿಯನ್ನೆಲ್ಲ ಕಳುಹಿಸಿ, ತಮ್ಮ ಕೆಲಸ ಮುಗಿಸಿಯೇ ಮೀಟಿಂಗ್‌ಗೆ ಕುಳಿತಿದ್ದರು ಎನ್ನಿ. ಆದರೆ ಲೈವ್ ಮೀಟಿಂಗ್‌ನಲ್ಲಿಯೇ ಬಾಸ್, 'ಸತ್ಯನಾರಾಯಣ್ ಅಲ್ಲೇ ಕೆಲವು ಪ್ರಪೋಸಲ್ ಅಪ್ರೂವ್ ಕೊಡ್ರೀ ಅರ್ಜೆಂಟ್' ಅಂದರು.

ಆದರೆ ಎಕ್ಸೆಲ್ ಶೀಟ್‌ನ ಸ್ಕ್ರೀನ್ ಶಾಟ್ ತೆಗೆಯುವುದು, ಫೈಲ್‌ಗಳ ಗಾತ್ರ ಹಗುರ ಮಾಡಿ ಇಮೇಲ್ ಮಾಡುವುದು, ಅಪ್ರೂವಿಂಗ್ ಸ್ಟೇಟಸ್ ಸರಿ ಇದೆಯಾ ಎಂದು ಚೆಕ್ ಮಾಡುವ ಎಲ್ಲ ಕೆಲಸಗಳಲ್ಲಿ ಆಫೀಸಿನ ಫ್ರಂಟ್ ಆಫೀಸ್ ಹುಡುಗ ಸಹಾಯ ಅವರಿಗೆ ಮಾಡುತ್ತಿದ್ದ. ಕುಂತರೆ ನಿಂತರೆ, 'ದಿನೇಶಾ ಇದೆರಡು ಅಪ್ರೂವ್ ಮಾಡಿಬಿಡು. ನೋಡು ಈ ಫೈಲ್‌ಗಳ ಝಿಪ್ ಮಾಡು' ಎಂದೆಲ್ಲ ಕೂಗುತ್ತಿದ್ದರು. ಈಗ ಹೀಗೆ ಲೈವ್‌ನಲ್ಲಿ ತನಗೆ ಬಾಸ್ ಕೆಲಸ ಹೇಳಿದಾಗ, ಸತ್ಯನಾರಾಯಣ್ ಬೆವರಿದರು. ತನ್ನ ಕೈಕೆಳಗೆ ಕೆಲಸ ಮಾಡುವ ಮಧ್ಯವಯಸ್ಕ ಚೀಫ್‌ಗಳ ಸ್ವಭಾವ ಬಾಸ್‌ಗೆ ಗೊತ್ತಿಲ್ಲವೇ ಅವತ್ತು ಝೂಮ್ ಮೀಟಿಂಗ್‌ನ ವಿಷಯವೇ ಬದಲಾಯಿತು.

"ಮಕ್ಕಳೊಡನೆ ಕ್ವಾಲಿಟಿ ಟೈಮ್ ಕಳೆಯುವುದೆಂದರೆ ಅವರೊಡನೆ ಕುಳಿತು ಟೀವಿ ನೋಡಿ, ಅವರು ಮಾಡಿದ ಪೇಂಟಿಂಗ್ ನೋಡಿ 'ಗುಡ್' ಎನ್ನುವುದಷ್ಟೇ ಅಲ್ಲ. ಈ ಜಗತ್ತಿನ ಭವಿಷ್ಯದ ವಿಚಾರಗಳನ್ನು ಕಲಿಯುವ ಶಕ್ತಿ ಮಕ್ಕಳಿಗೆ ಸಹಜವಾಗಿ ಇರುತ್ತದೆ. ನಾಳಿನ ನಿಯಮಗಳ ನಿರೂಪಕರು ಅವರೇ ಆಗಿರುತ್ತಾರೆ. ನಮ್ಮ ವಯಸ್ಸಿನವರು ರೂಪಿಸಿದ ಸಾಮಾಜಿಕ ವ್ಯವಸ್ಥೆಯನ್ನು ಅವರು ಮರುರೂಪಿಸುತ್ತಾ ಹೋಗುತ್ತಾರೆ. ಅದನ್ನೇ ಸೃಷ್ಟಿಯ ವಿಕಾಸ ಎನ್ನುವುದು. ನಾವು 50 ದಾಟಿದ ಬಳಿಕ ಅದೇ ವ್ಯವಸ್ಥೆಯಲ್ಲಿ ಬಾಳಬೇಕು. 'ಕಾಲ ಹಾಳಾಯಿತು' ಎಂದು ಬೈಯುವ ಹಿರಿಯರು ಎಲ್ಲ ಕಾಲದಲ್ಲಿಯೂ ಇದ್ದರು. ಆದರೆ ಬದಲಾವಣೆಗಳನ್ನು ತಡೆಯುವುದು ಸ್ವತಃ ಸರ್ವಶಕ್ತನಿಗೂ ಸಾಧ್ಯವಿಲ್ಲ" ಎಂದು ಬಾಸ್ ವಿವರಿಸಿದರು. 'ಲಾಕ್‌ಡೌನ್ ಸಮಯದಲ್ಲಿ ಮಕ್ಕಳಿಂದ ಪಾಠ ಹೇಳಿಸಿಕೊಳ್ಳಿ' ಎಂಬ ಸಾಲಿನೊಂದಿಗೆ ಮೀಟಿಂಗ್ ಮುಗಿಸಿದರು.

ಇತ್ತೀಚಿನ ವರ್ಷಗಳಲ್ಲಿ ತಂತ್ರಜ್ಞಾನವೇ ಬದುಕಿನ ಮುಖ್ಯ ಭಾಗವಾಗಿದೆ. ಅದರ ವೇಗಕ್ಕೆ ಹೊಂದಿಕೊಳ್ಳುವುದು ಹಿರಿಯರಿಗೆ ಕಷ್ಟವಾಗುತ್ತಿದೆ. ಮಕ್ಕಳು ಹುಟ್ಟುವಾಗಲೇ ಬಟನ್‌ಗಳನ್ನು ಒತ್ತುತ್ತ ಜಗ್ಗನೆ ಬೆಳಗುವ ದೀಪಗಳನ್ನು ನೋಡಿ ನಗುತ್ತ ಬೆಳೆಯುತ್ತ, ಈ ವಿಚಾರದಲ್ಲಿ ಚುರುಕುಮತಿಯವರಾಗಿರುತ್ತಾರೆ. ಆದ್ದರಿಂದ ಅವರಿಗೆ ಗೊತ್ತಿರುವ ವಿಚಾರಗಳನ್ನು ಅವರಿಂದ ಹೇಳಿಸಿಕೊಳ್ಳುವುದರಲ್ಲಿ ತಪ್ಪೇನಿಲ್ಲ ಅಲ್ಲವೇ..

ಹಾಗೆ ನೋಡಿದರೆ ಬಾಸ್ ಮುಂಚೆಯೂ ಇದೇ ಮಾತು ಹೇಳುತ್ತಿದ್ದರು. 'ಫೇಸ್‌ಬುಕ್‌ನಲ್ಲಿ ನಿಮ್ಮ ಮಕ್ಕಳು ಏನೇನು ಶೇರ್ ಮಾಡಿದ್ದಾರೆ ನೋಡಿದ್ದೀರಾ? ನಿಮ್ಮ ಮಕ್ಕಳ ಮೊಬೈಲ್‌ನಲ್ಲಿ ಮಾರ್ಕ್ ಆಗಿರುವ ಶಾಪಿಂಗ್ ಸೈಟ್‌ಗಳು ಯಾವುವು, ಆ್ಯಪ್‌ಗಳು ಯಾವುವು ಎಂಬುದನ್ನು ಗಮನಿಸಿ. ಅವರ ಇನ್‌ಸ್ಟಾಗ್ರಾಂ ಸ್ಟೋರಿಯನ್ನು ನೀವೂ ಶೇರ್ ಮಾಡಿಕೊಳ್ಳಿ. ಅವರ ಸ್ನೇಹಿತರ ಆಸಕ್ತಿಯನ್ನು ತಿಳಿದುಕೊಳ್ಳಿ. ಆದರೆ ಹೀಗೆ ಮಾಡುವ ಉದ್ದೇಶ ಅವರನ್ನು ಹದ್ದುಬಸ್ತಿನಲ್ಲಿಡುವ, ಅಥವಾ ಅವರ ಮೇಲೆ ಗೂಢಚಾರಿಕೆ ಮಾಡುವುದಲ್ಲ. ಬದಲಾಗಿ, ಈಗಿನ ನವಸಮಾಜವನ್ನು ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ಅವರೊಡನೆ ಈ ರೀತಿಯ ಸ್ನೇಹವಿರಲಿ' ಎನ್ನುತ್ತಿದ್ದರು.

ಅದಂತೂ ನಿಜ. ಮಕ್ಕಳೊಡನೆ ಸ್ನೇಹ ಎನ್ನುವುದು ಬರಿದಾಗದ ಪ್ರೀತಿಯ ಬಟ್ಟಲು ಬೊಗಸೆಯಲ್ಲಿ ಹಿಡಿದಂತೆ. ಪ್ರೀತಿ ಮತ್ತು ಮಾನವೀಯತೆಯನ್ನು ತಿಳಿಹೇಳುವುದಷ್ಟೇ ಅಪ್ಪಅಮ್ಮಂದಿರಿಗೆ ಇರುವ ಅವಕಾಶ. ಉಳಿದಂತೆ ತಮ್ಮ ಬದುಕನ್ನು ಅವರೇ ಕಟ್ಟಿಕೊಳ್ಳುತ್ತಾರೆ. ■